# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343

ಇ-ಮೇಲ್ ವಿಳಾಸ : director.ahr.kptcl@gmail.com


**KPTCL/GMT/CIVL(B9)/69/2023-MANAGER ESTATE (E-84999)**
(ಹಿಂದಿನ ಕಡತ ಸಂಖ್ಯೆ: ಕವಿಪ್ರನಿನಿ/ಬಿ9/14620/20-21)

08 FEB 2024

## ಸುತ್ತೋಲೆ

**ವಿಷಯ:** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮಗಳನ್ವಯ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಮೀಸಲಾತಿ ನಿಗದಿಪಡಿಸಿರುವ ಕಾಮಗಾರಿಗಳ ಮೊತ್ತವನ್ನು ರೂ.50.00 ಲಕ್ಷದಿಂದ ರೂ.1.00 ಕೋಟಿಗೆ ಹೆಚ್ಚಿಸಿರುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 22 ಶಾಸನ 2016 ದಿನಾಂಕ:29/06/2017 ಹಾಗೂ ದಿನಾಂಕ:17/07/20217.
2. ಕವಿಪ್ರನಿನಿ/ಬಿ19/84/94-95 ದಿನಾಂಕ:23/08/2017.
3. ಸರ್ಕಾರದ ಅಧಿಸೂಚನೆ ಸಂಖ್ಯೆ ಆಇ876 ವೆಚ್ಚ-12/2017 ದಿನಾಂಕ:15/09/2017.
4. ಸರ್ಕಾರದ ಸುತ್ತೋಲೆ ಸಂಖ್ಯೆ ಆಇ876 (ಪಿ-1) ವೆಚ್ಚ-12/17 ದಿನಾಂಕ:12/10/2017.
5. ಕವಿಪ್ರನಿನಿ/ಬಿ9/39331/16-17 ದಿನಾಂಕ:04/12/2017.
6. ಇಂಧನ ಇಲಾಖೆಯ ಪತ್ರ ಸಂಖ್ಯೆ ಎನರ್ಜಿ 219/ಸಮನ್ವಯ/2019 ದಿನಾಂಕ:13/02/2020.
7. ಕವಿಪ್ರನಿನಿ/ಬಿ8/401/19-20 ದಿನಾಂಕ:05/03/2020.
8. ಇಂಧನ ಇಲಾಖೆಯ ಪತ್ರ ಸಂಖ್ಯೆ ಎನರ್ಜಿ 793/ವಿಎಸ್‌ಸಿ/2020-ಇಎಂಸಿ ದಿನಾಂಕ:29/10/2020.
9. ಕವಿಪ್ರನಿನಿ/ಬಿ9/14620/20-21 ದಿನಾಂಕ: 17/12/2020.
10. ಸರ್ಕಾರದ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 15 ಶಾಸನ 2023 ದಿನಾಂಕ:27/07/2023.
11. ಸರ್ಕಾರದ ಅಧಿಸೂಚನೆ ಸಂಖ್ಯೆ FD 566 Exp-12/2023. ದಿನಾಂಕ:04/09/2023.
12. ಇಂಧನ ಇಲಾಖೆಯ ಪತ್ರ ಸಂಖ್ಯೆ ಎನರ್ಜಿ 257/ಸಿಓಆರ್‌ಡಿ 2023 ದಿನಾಂಕ:30/10/2023.
13. ಸರ್ಕಾರದ ಆದೇಶ ಸಂಖ್ಯೆ: FD611EXP-12/2023 ದಿನಾಂಕ:03/02/2024.

**ಪೀಠಿಕೆ:**

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ 2016 ರಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಟೆಂಡರ್ ಕಾಮಗಾರಿಗಳಲ್ಲಿ ಮೀಸಲಾತಿ ನೀಡುವಂತೆ ಉಲ್ಲೇಖ (1) ರ ಅಧಿಸೂಚನೆಗಳಲ್ಲಿ ತಿಳಿಸಲಾಗಿದ್ದು, ಉಲ್ಲೇಖ (2) ಪತ್ರದಲ್ಲಿ ಎಲ್ಲಾ ವಲಯಗಳಿಗೆ ಸದರಿ ಅಧಿಸೂಚನೆಯನ್ನು ಕಳುಹಿಸಲಾಗಿದ್ದು, ನಿಗಮದ ಅಂತರ್ಜಾಲದಲ್ಲಿ ಸಹ ಪ್ರಕಟಿಸಲಾಗಿದೆ.

2. ಉಲ್ಲೇಖ (3) ರಲ್ಲಿನ ಸರ್ಕಾರದ ಅಧಿಸೂಚನೆ ದಿನಾಂಕ:15/09/2017 ರಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ನಿಯಮಗಳು 2017 ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದ್ದು, ಸದರಿ ಅಧಿಸೂಚನೆಯನ್ನು ನಿಯಮ 27 (A) ರಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಸಮುದಾಯಕ್ಕೆ ಸೇರಿದ ಟೆಂಡರ್‌ದಾರರಿಗೆ ರೂ.50.00 ಲಕ್ಷಗಳ ಮಿತಿಯೊಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳಲ್ಲಿ ಆದ್ಯತೆ ನೀಡುವ ನಿಯಮ ಹೊರಡಿಸಲಾಗಿದೆ. ಸದರಿ ನಿಯಾಮಗಳನುಸಾರ ಸಂಬಂಧಪಟ್ಟ ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ಕಾಮಗಾರಿಗಳ ಆಯ್ಕೆಯನ್ನು Randomization ಪದ್ಧತಿ ಮೂಲಕ ಮಾಡಿಕೊಳ್ಳಲು ತಿಳಿಸಿಲಾಗಿದೆ.

3. ಉಲ್ಲೇಖ (4) ರ ಸರ್ಕಾರದ ದಿನಾಂಕ:12/10/2017 ರ ಸುತ್ತೋಲೆಯಲ್ಲಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ) ಇಲಾಖೆಯ Randomization ಕೈಗೊಳ್ಳಲು ಅನುಕೂಲವಾಗುವಂತೆ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು, ದಿನಾಂಕ:09/10/2017 ರಿಂದ e-Procurement Portal ನಲ್ಲಿ ಲಭ್ಯವಿದ್ದು, ಸದರಿ ತಂತ್ರಾಂಶವನ್ನು ಎಲ್ಲಾ ಇಲಾಖೆಗಳ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಗಳು ಕಡ್ಡಾಯವಾಗಿ ಉಪಯೋಗಿಸಿಕೊಳ್ಳತಕ್ಕದೆಂದು ಸೂಚಿಸಲಾಗಿದೆ. ಸದರಿ ಆದೇಶಗಳನ್ನು ನಿಗಮದ ಉಲ್ಲೇಖ (5) ರಲ್ಲಿನ ಸುತ್ತೋಲೆಯ ಮೂಲಕ ಅನುಸರಣೆಗಾಗಿ ಸೂಚಿಸಲಾಗಿದೆ.

EE-194

4. ಉಲ್ಲೇಖ (6) ರ ಇಂಧನ ಇಲಾಖೆಯ ಪತ್ರದಲ್ಲಿ, ಸರ್ಕಾರದಿಂಧ ನಿಗದಿಪಡಿಸಿದ ಮಾದರಿ ಟೆಂಡರ್ ದಾಖಲೆಗಳನ್ನು ಕೆಟಿಪಿಪಿ ಕಾಯ್ದೆಯ 2(ಡಿ) ರಡಿಯಲ್ಲಿ ವ್ಯಾಖ್ಯಾನಿಸಲಾದ ಎಲ್ಲಾ ಸಂಗ್ರಹಣಾ ಸಂಸ್ಥೆಗಳು ಬಳಕೆ ಮಾಡತಕ್ಕದೆಂದು ಹಾಗೂ ಅದರಲ್ಲಿನ ಎಲ್ಲಾ ಅಂಶಗಳು Electric Works ಸಂಗ್ರಹಣೆಯ ಸಂದರ್ಭಗಳಲ್ಲಿ ಅನ್ವಯವಾಗುತ್ತದೆಂದು ಹಾಗೂ ಅವುಗಳನ್ನು ಸರ್ಕಾರದಿಂದ ಕಾಲಕಾಲಕ್ಕೆ ನೀಡಲಾದ ತಿದ್ದುಪಡಿ, ಸುತ್ತೋಲೆ, ಆದೇಶಗಳಲ್ಲಿನ ಮಾರ್ಗಸೂಚಿಗಳ ಅನುಸಾರ ಸಂಗ್ರಹಣಾ ಸಂಸ್ಥೆಗಳು ಅನುಸರಿಸಬೇಕೆಂದು ತಿಳಿಸಲಾಗಿದೆ. ಸದರಿ ಪತ್ರದ ಪ್ರತಿಯನ್ನು ನಿಗಮದ ಎಲ್ಲಾ ವಲಯಗಳ ಮುಖ್ಯ ಇಂಜಿನಿಯರ್ (ವಿ) ಗಳಿಗೆ ಉಲ್ಲೇಖ (7) ರ ಪತ್ರದಲ್ಲಿ ಅನುಸರಣೆಗಾಗಿ ಕಳುಹಿಸಲಾಗಿದೆ.
5. ಉಲ್ಲೇಖ (8) ರಲ್ಲಿನ ಇಂಧನ ಇಲಾಖೆಯ ಪತ್ರದಲ್ಲಿ, ಕೆಟಿಪಿಪಿ ಕಾಯ್ದೆಯ ಅವಕಾಶಗಳು ಮತ್ತು ಅದರಡಿ ರಚಿಸಲಾದ ನಿಯಮಗಳು ಕಾಯ್ದೆಯ ಕಲಂ 2 (ಡಿ) ರಡಿ ವ್ಯಾಖ್ಯಾನಿಸಲಾದ ಎಲ್ಲಾ ಸಂಸ್ಥೆಗಳಿಗೂ ಅನ್ವಯವಾಗುತ್ತದೆಯೆಂದು ತಿಳಿಸಲಾಗಿದೆ. ಸದರಿ ಆದೇಶವನ್ನು ನಿಗಮದ ಉಲ್ಲೇಖ (9) ರಲ್ಲಿನ ಸುತ್ತೋಲೆ ಮೂಲಕ ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಸೂಚಿಸಲಾಗಿದೆ.
6. ಉಲ್ಲೇಖ (10) ಮತ್ತು (11) ಗಳಲ್ಲಿನ ಸರ್ಕಾರದ ಅಧಿಸೂಚನೆಗಳಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರಲ್ಲಿನ ತಿದ್ದುಪಡಿಯಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ 24.10% ಮೀಸಲಾತಿ ನಿಗದಿಪಡಿಸಿರುವ ಕಾಮಗಾರಿಗಳ ಮೊತ್ತವನ್ನು ರೂ.50.00 ಲಕ್ಷದಿಂದ ರೂ.1.00 ಕೋಟಿಗೆ ಹೆಚ್ಚಿಸಿಲಾಗಿದ್ದು, ಈ ಬಗ್ಗೆ ಅಗತ್ಯ ಕ್ರಮಕೈಗೊಳ್ಳುವಂತೆ ಉಲ್ಲೇಖ (12) ರಲ್ಲಿನ ಇಂಧನ ಇಲಾಖೆಯ ಪತ್ರದಲ್ಲಿ, ತಿಳಿಸಿಲಾಗಿದೆ.
7. ಉಲ್ಲೇಖ (13) ರ ಸರ್ಕಾರದ ಆದೇಶದಲ್ಲಿ ಮಾದರಿ ಟೆಂಡರ್ ದಾಖಲೆಗಳಲ್ಲಿನ ಷರತ್ತುಗಳನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಮೀಸಲಾತಿ ನಿಗದಿಪಡಿಸಿರುವ ಕಾಮಗಾರಿಗಳ ಮೊತ್ತವನ್ನು ರೂ.50.00 ಲಕ್ಷದಿಂದ ರೂ.1.00 ಕೋಟಿಗೆ ಹೆಚ್ಚಿಸಿರುವ ಹಿನ್ನೆಲೆಯಲ್ಲಿ, ಮಾರ್ಪಾಡು ಮಾಡಲಾಗಿದೆ.

**ಆದೇಶ :**

ಉಲ್ಲೇಖದಲ್ಲಿನ ಸರ್ಕಾರದ ಅಧಿಸೂಚನೆ, ಸುತ್ತೋಲೆ ಹಾಗೂ ಪತ್ರಗಳಲ್ಲಿ ನಿರ್ದೇಶಿಸಿರುವಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳಲ್ಲಿನ ತಿದ್ದುಪಡಿಯಂತೆ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ 24.10% ಮೀಸಲಾತಿ ನಿಗದಿಪಡಿಸಿರುವ ಕಾಮಗಾರಿಗಳ ಮೊತ್ತವನ್ನು ರೂ.50.00 ಲಕ್ಷದಿಂದ ರೂ.1.00 ಕೋಟಿಗೆ ಹೆಚ್ಚಿಸಿಲಾಗಿದ್ದು, ಸದರಿ ನಿಯಮವನ್ನು ನಿಗಮದಲ್ಲಿ ಕೈಗೊಳ್ಳುವ ಎಲ್ಲಾ ಕಾಮಗಾರಿಗಳ (ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ) ಟೆಂಡರ್‌ಗಳಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಸೂಚಿಸಲಾಗಿದೆ.

(ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ).

1/2/24

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/(ಸಿವಿಲ್), ಕವಿಪ್ರನಿನಿ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
6. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ) - ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/ (ಸಿವಿಲ್), ಕವಿಪ್ರನಿನಿ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.